ಪ್ರಾರ್ಥನಾ ಶ್ಲೋಕಗಳು

ಎನ್. ರಂಗನಾಥ ಶರ್ಮಾ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು

ಕಿರಿಯರ ಪುಸ್ತಕ ಮಾಲೆ

ಈ ಪುಸ್ತಕ ಮಾಲೆಯ ಕೆಲವು ಪುಸ್ತಕಗಳನ್ನು ಮತ್ತೆ ಪ್ರಕಟಿಸುವ ಅವಕಾಶ ದೊರಕಿದ್ದು ಸಾರ್ವಜನಿಕ ಶಿಕ್ಷಣ ಇಲಾಖೆ ಈ ಕೃತಿಗಳ ಬಗೆಗೆ ಬೇಡಿಕೆ ಸಲ್ಲಿಸಿದ್ದರಿಂದ, ಕನ್ನಡ ಸಾಹಿತ್ಯ ಪರಿಷತ್ತಿನ ಈ ಪ್ರಕಟಣೆಗಳ ಪುನರ್ ಮುದ್ರಣಕ್ಕೆ ನೆರವಾದ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಪರಿಷತ್ತು ಆಭಾರಿಯಾಗಿದೆ. ಹಾಗೆಯೇ ಅಲ್ಪಕಾಲದಲ್ಲೇ ಈ ಪುಸ್ತಕಗಳ ಮರುಮುದ್ರಣ ಮಾಡಿಕೊಟ್ಟ ಲಕ್ಷ್ಮಿ ಎಂಟರ್‌ಪ್ರೈಸಸ್ ಅವರಿಗೂ ನಮ್ಮ ಕೃತಜ್ಞತೆಗಳು.

ಜಿ. ಎಸ್. ಸಿದ್ಧಲಿಂಗಯ್ಯ.
ಅಧ್ಯಕ್ಷ

PRARTHANA SHLOKAGALU
by N. Ranganatha Sharma
Published by Kannada Sahitya Parishat
Chamarajpet, Bangalore-560 018

ಮೊದಲನೆಯ ಮುದ್ರಣ : ೧೯೮೦
ಎರಡನೆಯ ಮುದ್ರಣ : ೧೯೯೦
ಮೂರನೆಯ ಮುದ್ರಣ : ೧೯೯೧

ಹಕ್ಕುಗಳನ್ನು ಕಾಯ್ದಿರಿಸಿದೆ

ಪದಾಧಿಕಾರಿಗಳು

ಅಧ್ಯಕ್ಷ : ಪ್ರೊ| ಜಿ. ಎಸ್. ಸಿದ್ಧಲಿಂಗಯ್ಯ
ಗೌರವ ಕಾರ್ಯದರ್ಶಿಗಳು : ಗೊ. ರು. ಚನ್ನಬಸಪ್ಪ
ಟಿ. ರಾಮಯ್ಯ
ಗೌರವ ಕೋಶಾಧ್ಯಕ್ಷ : ಎಸ್. ವಿ. ಶ್ರೀನಿವಾಸರಾವ್

ಬೆಲೆ : ರೂ. ೩-೦೦

ಲಕ್ಷ್ಮಿ ಎಂಟರ್‌ಪ್ರೈಸಸ್
ಚಾಮರಾಜಪೇಟೆ, ಬೆಂಗಳೂರು-18.

ಪ್ರಾರ್ಥನಾ ಶ್ಲೋಕಗಳು

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ |
ಯಂ ನತ್ವಾ ಕೃತಕೃತ್ಯಾಃ ಸ್ಯುಃ ತಂ ನಮಾಮಿ ಗಜಾನನಂ || ೧ ||

ಬ್ರಹ್ಮನೇ ಮೊದಲಾದ ದೇವತೆಗಳು ಎಲ್ಲ ಕೆಲಸಗಳನ್ನು ಆರಂಭಿಸುವಾಗ ಯಾರನ್ನು ನಮಸ್ಕರಿಸಿ ಕೃತಕೃತ್ಯರಾಗುವರೋ ಆ ಗಣಪತಿಯನ್ನು ನಮಸ್ಕರಿಸುತ್ತೇನೆ.

ಬ್ರಹ್ಮಾಮುರಾರಿ ಸ್ತ್ರಿಪುರಾಂತಕಾರೀ
ಭಾನುಃ ಶಶೀ ಭೂಮಿಸುತೋ ಬುಧಶ್ಚ ||
ಗುರುಶ್ಚ ಶುಕ್ರಃ ಶನಿರಾಹುಕೇತವಃ
ಕುರ್ವಂತು ಸರ್ವೇ ಮಮ ಸುಪ್ರಭಾತಂ || ೨ ||

ಬ್ರಹ್ಮ, ವಿಷ್ಣು, ಶಿವ, ಸೂರ್ಯ, ಚಂದ್ರ, ಮಂಗಳ, ಬುಧ, ಬೃಹಸ್ಪತಿ, ಶುಕ್ರ, ಶನಿ, ರಾಹು, ಕೇತು—ಇವರೆಲ್ಲರೂ ನನಗೆ ಸುಪ್ರಭಾತವನ್ನು ಉಂಟುಮಾಡಲಿ.

ಪ್ರಾತರ್ಭಜಾಮಿ ಮನಸಾ ವಚಸಾಮಗಮ್ಯಂ
ವಾಚೋ ವಿಭಾಂತಿ ನಿಖಿಲಾ ಯದನುಗ್ರಹೇಣ |
ಯಂ ನೇತಿ ನೇತಿ ವಚನೈರ್ನಿಗಮಾ ಅವೋಚುಃ
ತಂ ದೇವದೇವಮಜಮಚ್ಯುತಮಾಹುರಗ್ರ್ಯಂ || ೩ ||

ಯಾರನ್ನು ಮಾತುಗಳಿಂದ ವರ್ಣಿಸಲು ಸಾಧ್ಯವಿಲ್ಲವೋ ಎಲ್ಲ ಮಾತುಗಳೇ ಯಾರ ಅನುಗ್ರಹದಿಂದ ಪ್ರಕಾಶಿಸುತ್ತವೆಯೋ, ಅಂಥ ಸ್ವಾಮಿಯನ್ನು ಪ್ರಾತಃಕಾಲದಲ್ಲಿ ಭಜಿಸುತ್ತೇನೆ. ವೇದಗಳೂ ಆ ಸ್ವಾಮಿಯನ್ನು ವರ್ಣಿಸಲು 'ಸಾಧ್ಯವಿಲ್ಲ ಸಾಧ್ಯವಿಲ್ಲ' ಎನ್ನುತ್ತವೆ. ಹಿರಿಯರು ಆತನನ್ನು ದೇವದೇವನೆಂದೂ ಹುಟ್ಟು ಸಾವುಗಳಿಲ್ಲದವನೆಂದೂ ಸರ್ವೋತ್ತಮನೆಂದೂ ಹೇಳುತ್ತಾರೆ.

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ |
ಗುರುಃ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ || ೪ ||

ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ದೇವನಾದ ಮಹೇಶ್ವರ, ಗುರುವೇ ಪ್ರತ್ಯಕ್ಷವಾಗಿರುವ ಪರಬ್ರಹ್ಮ. ಅಂಥ ಶ್ರೀ ಗುರುವಿಗೆ ನಮಸ್ಕಾರ.

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ |
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ || ೫ ||

ಅಜ್ಞಾನವೆಂಬ ಕಣ್ಣುಬೇನೆಯಿಂದ ಕುರುಡಾದವನ ಕಣ್ಣನ್ನು ಜ್ಞಾನವೆಂಬ ಕಾಡಿಗೆಯ ಕಡ್ಡಿಯಿಂದ ತೆರೆದು, ಆ ಕುರುಡನು ನೋಡುವಂತೆ ಯಾರು ಮಾಡಿದರೋ ಅಂಥ ಶ್ರೀ ಗುರುವಿಗೆ ನಮಸ್ಕಾರ.

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ |
ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ || ೬ ||

ಹೇ ಸರಸ್ವತಿದೇವಿ, ವರವನ್ನು ದಯಪಾಲಿಸುವವಳೆ, ಪ್ರಿಯವಾದ ರೂಪವುಳ್ಳವಳೆ, ವಿದ್ಯೆಯನ್ನು ಕಲಿಯಲು ಆರಂಭಿಸುತ್ತೇನೆ. ಸದಾ ನನಗೆ ಸಿದ್ಧಿಯುಂಟಾಗಲಿ.

ಶಾರದಾ ಶಾರದಾಂಭೋಜವದನಾ ವದನಾಂಬುಜೇ |
ಸರ್ವದಾ ಸರ್ವದಾಸ್ಮಾಕಂ ಸನ್ನಿಧಿಃ ಸಂನಿಧಿಂ ಕ್ರಿಯಾತ್ || ೭ ||

ಶರತ್ಕಾಲದ ತಾವರೆಯಂತೆ ಮುಖವುಳ್ಳವಳೂ ಸರ್ವವನ್ನೂ ಕೊಡತಕ್ಕವಳೂ ಉತ್ತಮಸಿಧಿಯೂ ಆದ ಸರಸ್ವತಿ ದೇವಿಯು ನಮ್ಮ ಮುಖವೆಂಬ ತಾವರೆಯಲ್ಲಿ ಯಾವಾಗಲೂ ನೆಲೆಸಿರಲಿ.

ಯಾ ಕುಂದೇಂದು ತುಷಾರಹಾರಧವಲಾ ಯಾ ಶುಭ್ರವಸ್ತ್ರಾನ್ವಿತಾ
ಯಾ ವೀಣಾವರದಂಡಮಂಡಿತಕರಾ ಯಾ ಶ್ವೇತಪದ್ಮಾಸನಾ |
ಯಾ ಬ್ರಹ್ಮಾಚ್ಯುತಶಂಕರ ಪ್ರಭೃತಿಭಿರ್ದೇವೈಃ ಸದಾ ವಂದಿತಾ
ಸಾ ಮಾಂ ಪಾತು ಸರಸ್ವತೀ ಭಗವತೀ ನಿಃಶೇಷಜಾಡ್ಯಾಪಹಾ || ೮ ||

ಮಲ್ಲಿಗೆಹೂ, ಚಂದ್ರ, ಹಿಮ, ಮುತ್ತಿನಹಾರಗಳಂತೆ ಬೆಳ್ಳಗಿರುವ, ಬಿಳಿಯ ಶುಭ್ರವಸ್ತ್ರವನ್ನು ಧರಿಸಿರುವ, ವೀಣಾದಂಡವನ್ನು ಕೈಯಲ್ಲಿ ಹಿಡಿದಿರುವ, ಬಿಳಿಯ ತಾವರೆ ಹೂವಿನ ಮೇಲೆ ಕುಳಿತಿರುವ, ಜಡತ್ವವನ್ನು ಪೂರ್ಣವಾಗಿ ತೊಡೆದು ಹಾಕುವ ಮತ್ತು ಬ್ರಹ್ಮ ವಿಷ್ಣು ಶಿವ ಮೊದಲಾದವರಿಂದ ವಂದಿತಳಾದ ಭಗವತೀ ಸರಸ್ವತೀ ದೇವಿಯು ನನ್ನನ್ನು ಕಾಪಾಡಲಿ.

ವಸುಂಧರೇ ನಮಸ್ತುಭ್ಯಂ ಸರ್ವಸಸ್ಯಮನೋಹರೇ |
ಆಧಾರಭೂತೇ ಸರ್ವೇಷಾಂ ಪಾದಕ್ಷೇಪಂ ಕ್ಷಮಸ್ವ ಮೇ || ೯ ||

ಸಕಲ ಸಸ್ಯಗಳಿಂದಲೂ ಮನೋಹರಳಾದ ಭೂದೇವಿಯೆ ಎಲ್ಲರಿಗೂ ಆಧಾರವಾದವಳೆ. ನಾನು ನಿನ್ನಮೇಲೆ ಹೆಜ್ಜೆಯಿಡುವುದನ್ನು ಮನ್ನಿಸು.

ಭಾಸ್ಕರಾಯ ಜಗದ್ಭರ್ತ್ರೇ ರವಯೇ ಸರ್ವಸಾಕ್ಷಿಣೇ |
ತಪ್ತಚಾಮೀಕರಾಭಾಯ ತ್ರಿಲೋಕೀಚಕ್ಷುಷೇ ನಮಃ || ೧೦ ||

ಬೆಳಕನ್ನುಂಟುಮಾಡತಕ್ಕವನೂ ಜಗತ್ತನ್ನು ಧರಿಸಿದವನೂ ಎಲ್ಲರ ಎಲ್ಲ ಕರ್ಮಗಳಿಗೂ ಸಾಕ್ಷಿಯಾದವನೂ ಕಾಯಿಸಿದ ಚಿನ್ನದಂತೆ ಕಾಂತಿಯುಳ್ಳವನೂ ಮೂರು ಲೋಕದ ಕಣ್ಣೂ ಆದ ಸೂರ್ಯನಿಗೆ ನಮಸ್ಕಾರ.

ಗಾವೋ ಮೇ ಮಾತರಃ ಸಂತು ಗೃಹೇ ನಿತ್ಯಂ ಶುಭಾವಹಾಃ |
ಶರಣ್ಯಾಃ ಸರ್ವಭೂತಾನಾಂ ಭೂಯೋ ಭೂಯೋ
ನಮಾಮ್ಯಹಂ || ೧೧ ||

ಮಂಗಳವನ್ನುಂಟುಮಾಡುವ ತಾಯಂದಿರಾದ ಹಸುಗಳು ನನ್ನ ಮನೆಯಲ್ಲಿ ಯಾವಾಗಲೂ ಇರಲಿ. ಎಲ್ಲ ಜನರಿಗೂ ಅವು ಆಶ್ರಯವನ್ನು ನೀಡತಕ್ಕವು. ಅಂಥ ಹಸುಗಳಿಗೆ ಮತ್ತೆ ಮತ್ತೆ ನಮಸ್ಕರಿಸುತ್ತೇನೆ.

ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣುರೂಪಿಣೇ |
ಅಗ್ರತಃ ಶಿವರೂಪಾಯ ವೃಕ್ಷರಾಜಾಯ ತೇ ನಮಃ || ೧೨ ||

ಬುಡದಲ್ಲಿ ಬ್ರಹ್ಮರೂಪನೂ ನಡುವೆ ವಿಷ್ಣುರೂಪನೂ ತುದಿಯಲ್ಲಿ ಶಿವರೂಪನೂ ವೃಕ್ಷರಾಜನೂ ಆದ ನಿನಗೆ— ಅಶ್ವತ್ಥವೃಕ್ಷಕ್ಕೆ ನಮಸ್ಕಾರ.

ಯೋಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ
ಸಂಜೀವಯುತ್ಯಖಿಲಶಕ್ತಿಧರಃ ಸ್ವಧಾಮ್ನಾ |
ಅನ್ಯಾಂಶ್ಚ ಹಸ್ತಚರಣ ಶ್ರವಣತ್ವಗಾದೀನ್
ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಂ ॥ ೧೩ ॥

ಸರ್ವಶಕ್ತನಾದ ಯಾವಾತನು ನನ್ನೊಳಹೊಕ್ಕು ಅಲ್ಲಿ ಸುಪ್ತವಾಗಿದ್ದ ನನ್ನ ಈ ಮಾತನ್ನು ತನ್ನ ಮಹಿಮೆಯಿಂದ ನುಡಿಸುವನೋ, ಅಲ್ಲದೆ ಕೈಕಾಲು ಕಿವಿ ಚರ್ಮ ಮೊದಲಾದವುಗಳಿಗೂ ಉಸಿರಿಗೂ ಚೈತನ್ಯವನ್ನು ನೀಡುವನೋ ಆ ಭಗವಂತನೂ ಪರಮಪುರುಷನೂ ಆದ ನಿನಗೆ ನಮಸ್ಕಾರ.

ತ್ವಮೇವ ಮಾತಾ ಚ ಪಿತಾ ತ್ವಮೇವ
ತ್ವಮೇವ ಬಂಧುಶ್ಚ ಸಖಾ ತ್ವಮೇವ |
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ
ತ್ವಮೇವ ಸರ್ವಂ ಮಮ ದೇವದೇವ ॥ ೧೪ ॥

ಹೇ ದೇವದೇವ, ನೀನೇ ನನಗೆ ತಾಯಿ, ನೀನೇ ತಂದೆ, ನೀನೇ ನೆಂಟ, ನೀನೇ ಗೆಳೆಯ. ವಿದ್ಯೆ, ಹಣ, ಎಲ್ಲವೂ ನೀನೇ.

ಯತ್ಕೀರ್ತನಂ ಯತ್ಸ್ಮರಣಂ ಯದೀಕ್ಷಣಂ
ಯದ್ವಂದನಂ ಯಚ್ಛ್ರವಣಂ ಯದರ್ಹಣಂ |
ಲೋಕಸ್ಯ ಸದ್ಯೋ ವಿಧುನೋತಿ ಕಲ್ಮಷಂ
ತಸ್ಮೈ ಸುಭದ್ರಶ್ರವಸೇ ನಮೋ ನಮಃ ॥ ೧೫ ॥

ಭಗವಂತನ ನಾಮಕೀರ್ತನೆ, ಸ್ಮರಣೆ, ನೋಟ, ವಂದನೆ, ಅವನ ವಿಷಯದ ಕಥೆಯನ್ನು ಕೇಳುವುದು, ಪೂಜಿಸುವುದು— ಎಲ್ಲವೂ ಜನರ ಪಾಪವನ್ನು ಒಡನೆಯೇ ತೊಡೆದುಹಾಕುತ್ತದೆ. ಅಂತಹ ಕೀರ್ತಿಶಾಲಿಯಾದ ಪರಮಾತ್ಮನಿಗೆ ನಮೋ ನಮಃ.

ನಮಸ್ತೇ ಸತೇ ಸರ್ವಲೋಕಾಶ್ರಯಾಯ
ನಮಸ್ತೇ ಚಿತೇ ವಿಶ್ವರೂಪಾತ್ಮಕಾಯ |
ನಮೋಽದ್ವೈತತತ್ತ್ವಾಯ ಮುಕ್ತಿಪ್ರದಾಯ
ನಮೋ ಬ್ರಹ್ಮಣೇ ವ್ಯಾಪಿನೇ ನಿರ್ಗುಣಾಯ || ೧೬ |

ಸಮಸ್ತ ಲೋಕಗಳಿಗೆ ಆಶ್ರಯನೂ ಸದ್ರೂಪನೂ ಆದ ನಿನಗೆ ನಮಸ್ಕಾರ. ವಿಶ್ವರೂಪನೂ ಚಿದ್ರೂಪನೂ ಆದ ನಿನಗೆ ನಮಸ್ಕಾರ. ಮುಕ್ತಿದಾತನೂ ಅದ್ವಯವಾದ ಸ್ವರೂಪವುಳ್ಳವನೂ ಆದವನಿಗೆ ನಮಸ್ಕಾರ. ಸರ್ವವ್ಯಾಪಿಯೂ ನಿರ್ಗುಣನೂ ಆದ ಬ್ರಹ್ಮವಸ್ತುವಿಗೆ ನಮಸ್ಕಾರ.

ತ್ವಮೇಕಂ ಶರಣ್ಯಂ ತ್ವಮೇಕಂ ವರೇಣ್ಯಂ
ತ್ವಮೇಕಂ ಜಗತ್ಕಾರಣಂ ವಿಶ್ವರೂಪಂ |
ತ್ವಮೇಕಂ ಜಗತ್ಕರ್ತೃ ಪಾತೃ ಪ್ರಹರ್ತೃ
ತ್ವಮೇಕಂ ಪರಂ ನಿಷ್ಕಲಂ ನಿರ್ವಿಕಲ್ಪಂ || ೧೭ ||

ನೀನೇ ನಮಗೆ ಶರಣು. ಶ್ರೇಷ್ಠನೂ ಜಗತ್ತಿಗೆ ಕಾರಣನೂ ವಿಶ್ವರೂಪನೂ ಆದವನು ನೀನೇ. ಲೋಕವನ್ನು ಸೃಜಿಸತಕ್ಕವನೂ ಪಾಲಿಸತಕ್ಕವನೂ ಸಂಹರಿಸತಕ್ಕವನೂ ನೀನೇ. ನಿಷ್ಕಲವೂ ನಿರ್ವಿಕಲ್ಪವೂ ಆದ ಪರಮಾತ್ಮನು ನೀನೇ.

ಯಂ ಬ್ರಹ್ಮಾ ವರುಣೇಂದ್ರ ರುದ್ರಮರುತಃ ಸ್ತುನ್ವಂತಿ
ದಿವ್ಯೈಃಸ್ತವೈಃ
ವೇದೈಃ ಸಾಂಗಪದಕ್ರಮೋಪನಿಷದೈರ್ಗಾಯಂತಿ ಯಂ ಸಾಮಗಾಃ |
ಧ್ಯಾನಾವಸ್ಥಿತ ತದ್ಗತೇನ ಮನಸಾ ಪಶ್ಯಂತಿ ಯಂ ಯೋಗಿನೋ
ಯಸ್ಯಾಂತಂ ನ ವಿದುಃ ಸುರಾಸುರಗಣಾ ದೇವಾಯ
ತಸ್ಮೈ ನಮಃ || ೧೮ ||

ಬ್ರಹ್ಮ, ವರುಣ, ಇಂದ್ರ, ರುದ್ರರು ಮತ್ತು ಮರುತ್ತು ಗಳು ಯಾರನ್ನು ದಿವ್ಯಸ್ತೋತ್ರಗಳಿಂದ ಸ್ತುತಿಸುತ್ತಾರೋ ಸಾಮಗಾನ ಮಾಡತಕ್ಕವರು ಅಂಗ, ಪದ, ಕ್ರಮ, ಉಪನಿಷತ್ ಸಹಿತವಾದ ವೇದಗಳಿಂದ ಯಾರನ್ನು ಹಾಡುತ್ತಾರೋ ಧ್ಯಾನ ದಿಂದ ನಿಶ್ಚಲವಾದ ಮನಸ್ಸಿನಿಂದ ಯೋಗಿಗಳು ಯಾರನ್ನು ಕಾಣುತ್ತಾರೋ, ಸುರಾಸುರರೂ ಸಹ ಯಾರ ಕೊನೆಯನ್ನು ತಿಳಿಯದೆ ಇದ್ದಾರೋ ಅಂಥ ಸ್ವಾಮಿಗೆ ನಮಸ್ಕಾರ.

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ |
ಅರ್ಹನ್ನಿತ್ಯಥ ಜೈನಶಾಸನಪರಾಃ ಕರ್ಮೇತಿ ಮೀಮಾಂಸಕಾಃ
ಸೋಽಯಂ ವೋ ವಿದಧಾತು ವಾಂಛಿತಫಲಂ
ತ್ರೈಲೋಕ್ಯನಾಥೋ ವಿಭುಃ || ೧೯ ||

ಶೈವರು ಶಿವನೆಂದೂ ವೇದಾಂತಿಗಳು ಬ್ರಹ್ಮನೆಂದೂ ಬೌದ್ಧರು ಬುದ್ಧನೆಂದೂ ಪ್ರಮಾಣಗಳನ್ನು ತೋರಿಸುವುದರಲ್ಲಿ ಸಮರ್ಥರಾದ ತಾರ್ಕಿಕರು ಕರ್ತನೆಂದೂ ಜೈನರು ಅರ್ಹಂತ ನೆಂದೂ ಮೀಮಾಂಸಕರು ಕರ್ಮವೆಂದೂ ಯಾರನ್ನು ಭಜಿಸು ತ್ತಾರೋ ಅಂಥ ಸರ್ವಲೋಕೇಶ್ವರನಾದ ಸ್ವಾಮಿಯು ಇಷ್ಟಾರ್ಥವನ್ನು ಕೊಡಲಿ.

ನಮಸ್ತೇ ನಮಸ್ತೇ ವಿಭೋ ವಿಶ್ವಮೂರ್ತೇ
ನಮಸ್ತೇ ನಮಸ್ತೇ ಚಿದಾನಂದಮೂರ್ತೇ |
ನಮಸ್ತೇ ನಮಸ್ತೇ ತಪೋಯೋಗಗಮ್ಯ
ನಮಸ್ತೇ ನಮಸ್ತೇ ಶ್ರುತಿಜ್ಞಾನಗಮ್ಯ || ೨೦ ||

ಹೇ ಸ್ವಾಮಿ, ವಿಶ್ವಮೂರ್ತಿಯೇ ನಿನಗೆ ನಮಸ್ಕಾರ. ಜ್ಞಾನ ಮತ್ತು ಆನಂದಗಳ ಮೂರ್ತಿಯೆ, ತಪೋಯೋಗದಿಂದಲೂ ವೇದಜ್ಞಾನದಿಂದಲೂ ಗಮ್ಯನಾದವನೆ, ನಿನಗೆ ಮತ್ತೆ ಮತ್ತೆ ನಮಸ್ಕಾರ.

ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಂ |
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ
ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಂ || ೨೧ ||

ಶಾಂತಮೂರ್ತಿಯೂ ಆದಿಶೇಷನ ಮೇಲೆ ಮಲಗಿದವನೂ ಕಮಲದಂತೆ ನಾಭಿಯುಳ್ಳವನೂ ದೇವೇಶ್ವರನೂ ವಿಶ್ವಕ್ಕೆ ಆಧಾರನೂ ಆಕಾಶದಂತೆ ಸರ್ವವ್ಯಾಪಿಯೂ ಮೇಘದಂತೆ ಶ್ಯಾಮಲವರ್ಣನೂ ಶುಭಾಂಗನೂ ಲಕ್ಷ್ಮೀಕಾಂತನೂ ತಾವರೆಯದಳದಂತೆ ಕಣ್ಣುಳ್ಳವನೂ ಯೋಗಿಗಳ ಹೃದಯದಲ್ಲಿ ಧ್ಯಾನಗಮ್ಯನೂ ಸಂಸಾರದ ಭಯವನ್ನು ಹೋಗಲಾಡಿಸತಕ್ಕವನೂ ಸರ್ವಲೋಕಗಳಿಗೆ ಒಡೆಯನೂ ಆದ ವಿಷ್ಣುವನ್ನು ವಂದಿಸುತ್ತೇನೆ.

ನಾರಾಯಣಾಯ ನಲಿನಾಯತಲೋಚನಾಯ
ನಾಮಾವಶೇಷಿತ ಮಹಾಬಲಿವೈಭವಾಯ |
ನಾನಾ ಚರಾಚರವಿಧಾಯಕ ಜನ್ಮದೇಶ
ನಾಭೀಪುಟಾಯ ಪುರುಷಾಯ ನಮಃ ಪರಸ್ಮೈ || ೨೨ ||

ತಾವರೆಯಂತೆ ವಿಶಾಲವಾದ ನೇತ್ರವುಳ್ಳವನೂ ಬಲಿಚಕ್ರವರ್ತಿಯ ವೈಭವವನ್ನು ತೊಡೆದುಹಾಕಿದವನೂ ಅನೇಕ ಬಗೆಯ

ಸ್ಥಾವರಜಂಗಮಗಳನ್ನು ಸೃಷ್ಟಿಸುವ ನಾಭಿಯುಳ್ಳವನೂ (ಸೃಷ್ಟಿ ಕರ್ತನಾದ ಬ್ರಹ್ಮನು ನಾಭಿಯಲ್ಲಿ ಹುಟ್ಟಿರುವುದರಿಂದ), ಪರಮ ಪುರುಷನೂ ಆದ ನಾರಾಯಣನಿಗೆ ನಮಸ್ಕಾರ.

ವೈದೇಹೀ ಸಹಿತಂ ಸುರದ್ರುಮತಲೇ ಹೈಮೇ ಮಹಾಮಂಟಪೇ
ಮಧ್ಯೇಪುಷ್ಪಕಮಾಸನೇ ಮಣಿಮಯೇ ವೀರಾಸನೇ ಸುಸ್ಥಿತಂ ।
ಅಗ್ರೇ ವಾಚಯತಿ ಪ್ರಭಂಜನಸುತೇ ತತ್ತ್ವಂ ಮುನಿಭ್ಯಃ ಪರಂ
ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂ ಭಜೇ
ಶ್ಯಾಮಲಂ ॥ ೨೩ ॥

ಪಾರಿಜಾತವೃಕ್ಷದ ಅಡಿಯಲ್ಲಿ ಚಿನ್ನದ ಮಹಾಮಂಟಪ ದಲ್ಲಿರುವ ಪುಷ್ಪಕವಿಮಾನದೊಳಗೆ ರತ್ನಖಚಿತವಾದ ಸಿಂಹಾಸನ ದಲ್ಲಿ ವೀರಾಸನದಿಂದ ಕುಳಿತು, ಸೀತಾದೇವಿಯಿಂದಲೂ ಭರತಾದಿ ಗಳಿಂದಲೂ ಪರಿವೃತನಾಗಿ, ಎದುರಿಗೆ ಹನುಮಂತನು ತತ್ತ್ವ ಗ್ರಂಥವನ್ನು ಓದುತ್ತಿರುವಾಗ, ವೇದಾಂತ ತತ್ತ್ವವನ್ನು ಮುನಿ ಗಳಿಗೆ ಉಪದೇಶಿಸುತ್ತಿರುವ ಶ್ಯಾಮಲಾಂಗನಾದ ಶ್ರೀರಾಮನನ್ನು ಭಜಿಸುತ್ತೇನೆ.

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥ ೨೪ ॥

ರಾಮಭದ್ರ, ರಾಮಚಂದ್ರ, ಲೋಕವನ್ನು ಸೃಜಿಸಿದ ಬ್ರಹ್ಮ, ರಘುನಾಥ, ಜಗನ್ನಾಥ, ಸೀತಾಪತಿ—ಎಂದು ವಿವಿಧ ನಾಮಗಳಿಂದ ಸ್ತುತಿಸಲ್ಪಡುವ ಶ್ರೀರಾಮನಿಗೆ ನಮಸ್ಕಾರ.

ಮನೋಜವಂ ಮಾರುತತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ |
ವಾತಾತ್ಮಜಂ ವಾನರಯೂಥಮುಖ್ಯಂ
ಶ್ರೀರಾಮದೂತಂ ಶಿರಸಾ ನಮಾಮಿ || ೨೫ ||

ಮನೋವೇಗ – ವಾಯುವೇಗವುಳ್ಳವನೂ ಜಿತೇಂದ್ರಿಯನೂ ಬುದ್ಧಿಶಾಲಿಗಳಲ್ಲಿ ಅಗ್ರಗಣ್ಯನೂ ವಾಯುಪುತ್ರನೂ ಕಪಿಸೇನೆಯಲ್ಲಿ ಮುಖ್ಯನೂ ಶ್ರೀರಾಮದೂತನೂ ಆದ ಹನುಮಂತನನ್ನು ತಲೆಬಾಗಿ ವಂದಿಸುತ್ತೇನೆ.

ಯತ್ರ ಯತ್ರ ರಘುನಾಥಕೀರ್ತನಂ
ತತ್ರ ತತ್ರ ಕೃತಮಸ್ತಕಾಂಜಲಿಂ |
ಬಾಷ್ಪವಾರಿಪರಿಪೂರ್ಣಲೋಚನಂ
ಮಾರುತಿಂ ನಮತ ರಾಕ್ಷಸಾಂತಕಂ || ೨೬ ||

ಎಲ್ಲೆಲ್ಲಿ ಶ್ರೀರಾಮಕೀರ್ತನೆ ನಡೆಯುವುದೋ ಅಲ್ಲಲ್ಲಿ ತನ್ನ ತಲೆಯಮೇಲೆ ಎರಡು ಕೈಗಳಿಂದ ಅಂಜಲಿಯನ್ನು ರಚಿಸಿಕೊಂಡು ಆನಂದಬಾಷ್ಪವನ್ನು ಸುರಿಸುವ ಮತ್ತು ರಾಕ್ಷಸರಿಗೆ ಯಮನಾದ ಮಾರುತಿಯನ್ನು ವಂದಿಸಿರಿ.

ಕರಾರವಿಂದೇನ ಪದಾರವಿಂದಂ
ಮುಖಾರವಿಂದೇ ವಿನಿವೇಶಯಂತಂ |
ವಟಸ್ಯ ಪತ್ರಸ್ಯ ಪುಟೇ ಶಯಾನಂ
ಬಾಲಂ ಮುಕುಂದಂ ಮನಸಾ ಸ್ಮರಾಮಿ || ೨೭ ||

ಕಮಲದಂತಿರುವ ಕೈಯಿಂದ ಪಾದಕಮಲವನ್ನು ಮುಖಕಮಲದಲ್ಲಿ ಇರಿಸಿಕೊಂಡು, ಆಲದ ಎಲೆಯ ಮೇಲೆ (ಪ್ರಳಯ

ಜಲದಲ್ಲಿ) ಮಲಗಿರುವ ಬಾಲಮುಕುಂದನನ್ನು ಮನಸ್ಸಿಂದ ನೆನೆಸಿಕೊಳ್ಳುತ್ತೇನೆ.

ಪ್ರಸನ್ನಪಾರಿಜಾತಾಯ ತೋತ್ರವೇತ್ರೈಕ ಪಾಣಯೇ |
ಜ್ಞಾನಮುದ್ರಾಯ ಕೃಷ್ಣಾಯ ಗೀತಾಮೃತದುಹೇ ನಮಃ || ೨೮ ||

ಶರಣಾಗತರಿಗೆ (ಇಷ್ಟಾರ್ಥವನ್ನು ಕೊಡುವ) ದೇವ ಪಾರಿಜಾತವಾಗಿರುವ ಕೈಯಲ್ಲಿ ಜಾಜಿ ಮತ್ತು ಕೊಳಲನ್ನು ಹಿಡಿದಿರುವ, ಜ್ಞಾನಮುದ್ರೆಯನ್ನು ಧರಿಸಿ ಗೀತಾಮೃತವನ್ನು ಬೋಧಿಸುತ್ತಿರುವ ಶ್ರೀಕೃಷ್ಣನಿಗೆ ನಮಸ್ಕಾರ.

ಜಯತು ಜಯತು ದೇವೋ ದೇವಕೀನಂದನೋऽಯಂ
ಜಯತು ಜಯತು ಕೃಷ್ಣೋ ವೃಷ್ಣಿವಂಶಪ್ರದೀಪಃ |
ಜಯತು ಜಯತು ಮೇಘ ಶ್ಯಾಮಲಃ ಕೋಮಲಾಂಗೋ
ಜಯತು ಜಯತು ಪೃಥ್ವೀ ಭಾರನಾಶೋ ಮುಕುಂದಃ || ೨೯ ||

ದೇವಕೀ ಪುತ್ರನೂ ವೃಷ್ಣಿವಂಶವನ್ನು ಬೆಳಗಿಸತಕ್ಕ ಪ್ರದೀಪವೂ ದೇವನೂ ಆದ ಶ್ರೀಕೃಷ್ಣನು ಜಯಿಸಲಿ. ಮೇಘದಂತೆ ಶ್ಯಾಮಲಾಂಗನೂ ಕೋಮಲಾಂಗನೂ ಭೂಭಾರ ವನ್ನು ಹೋಗಲಾಡಿಸತಕ್ಕವನೂ ಆದ ಮುಕುಂದನೂ ಜಯಶೀಲನಾಗಲಿ.

ವೇದಾನುದ್ಧರತೇ ಜಗನ್ನಿವಹತೇ ಭೂಗೋಲಮುದ್ಬಿಭ್ರತೇ
ದೈತ್ಯಾನ್ ದಾರಯತೇ ಬಲಿಂ ಛಲಯತೇ ಕ್ಷತ್ರಕ್ಷಯಂ ಕುರ್ವತೇ |
ಪೌಲಸ್ತ್ಯಂ ಜಯತೇ ಹಲಂ ಕಲಯತೇ ಕಾರುಣ್ಯಮಾತನ್ವತೇ
ಮ್ಲೇಚ್ಛಾನ್ ಮೂರ್ಛಯತೇ ದಶಾಕೃತಿಕೃತೇ ಕೃಷ್ಣಾಯ
ತುಭ್ಯಂ ನಮಃ || ೩೦ ||

(ಮತ್ಸ್ಯಾವತಾರದಲ್ಲಿ) ವೇದಗಳನ್ನು ಉದ್ಧರಿಸಿದ, (ಕೂರ್ಮಾವತಾರದಲ್ಲಿ) ಲೋಕವನ್ನು ಧರಿಸಿದ, (ವರಾಹಾವತಾರದಲ್ಲಿ) ಭೂಗೋಳವನ್ನು ಮೇಲೆತ್ತಿದ, (ನರಸಿಂಹಾವತಾರದಲ್ಲಿ) ಹಿರಣ್ಯಕಶಿಪು ಮೊದಲಾದ ದೈತ್ಯರನ್ನು ಸಂಹರಿಸಿದ, (ಪರಶುರಾಮಾವತಾರದಲ್ಲಿ) ಕ್ಷತ್ರಿಯರ ನಾಶವನ್ನು ಮಾಡಿದ, (ರಾಮಾವತಾರದಲ್ಲಿ) ರಾವಣನನ್ನು ಜಯಿಸಿದ, (ಬಲರಾಮಾವತಾರದಲ್ಲಿ) ಹಲಾಯುಧವನ್ನು ಧರಿಸಿದ, (ಬೌದ್ಧಾವತಾರದಲ್ಲಿ) ದಯೆಯನ್ನು ಪ್ರಕಟಿಸಿದ, (ಕಲ್ಕ್ಯವತಾರದಲ್ಲಿ) ದುರುಳರನ್ನು ನಾಶಮಾಡುವ ಶ್ರೀಕೃಷ್ಣನಾದ ನಿನಗೆ ನಮಸ್ಕಾರ.

ಪದ್ಮಾಸನಸ್ಥಿತೇ ದೇವಿ ಪರಬ್ರಹ್ಮಸ್ವರೂಪಿಣಿ |
ಪರಮೇಶಿ ಜಗನ್ಮಾತರ್ಮಹಾಲಕ್ಷ್ಮಿ ನಮೋಽಸ್ತುತೇ || ೩೧ ||

ಪದ್ಮಪೀಠದಲ್ಲಿ ಕುಳಿತಿರುವ ದೇವಿಯೆ, ಪರಬ್ರಹ್ಮಸ್ವರೂಪಳೆ, ಪರಮೇಶ್ವರಿ, ಜಗತ್ತಿನ ತಾಯಿಯಾದ ಹೇ ಮಹಾಲಕ್ಷ್ಮಿ, ನಿನಗೆ ನಮಸ್ಕಾರವಿರಲಿ.

ಸರಸಿಜನಿಲಯೇ ಸರೋಜಹಸ್ತೇ
ಧವಲತರಾಂಶುಕಗಂಧಮಾಲ್ಯಶೋಭೇ |
ಭಗವತಿ ಹರಿವಲ್ಲಭೇ ಮನೋಜ್ಞೇ
ತ್ರಿಭುವನಭೂತಿಕರಿ ಪ್ರಸೀದ ಮಹ್ಯಂ || ೩೨ ||

ಹೇ ಪದ್ಮವಾಸಿನೆ, ಪದ್ಮಹಸ್ತೆ, ಶುಭ್ರವಸ್ತ್ರವನ್ನೂ, ಗಂಧಮಾಲ್ಯಗಳನ್ನೂ ಧರಿಸಿ ಶೋಭಿಸತಕ್ಕವಳೆ, ಭಗವತಿ, ವಿಷ್ಣುಪ್ರಿಯೆ, ಮನೋಹರಾಕೃತಿಯುಳ್ಳವಳೆ, ಮೂರುಲೋಕಗಳಿಗೂ ಶುಭವನ್ನು ಮಾಡತಕ್ಕವಳೆ, ನನಗೆ ಪ್ರಸನ್ನಳಾಗು.

ಮೃತ್ಯುಂಜಯಾಯ ರುದ್ರಾಯ ನೀಲಕಂಠಾಯ ಶಂಭವೇ ।
ಅಮೃತೇಶಾಯ ಶರ್ವಾಯ ಮಹಾದೇವಾಯ ತೇ ನಮಃ ॥ ೩೩ ॥

ಮೃತ್ಯುಂಜಯನೂ, ರುದ್ರನೂ, ನೀಲಕಂಠನೂ, ಸುಖ ಪ್ರದನೂ, ಮೋಕ್ಷಕ್ಕೆ ಒಡೆಯನೂ, ಶರ್ವನೂ, ಮಹಾ ದೇವನೂ ಆದ ನಿನಗೆ ನಮಸ್ಕಾರ.

ಪಂಚಾನನಾಯ ಫಣಿರಾಜವಿಭೂಷಣಾಯ
ಹೇಮಾಂಶುಕಾಯ ಭುವನತ್ರಯ ಮಂಡನಾಯ ।
ಆನಂದಭೂಮಿವರದಾಯ ತಮೋಹರಾಯ
ದಾರಿದ್ರ್ಯದುಃಖದಹನಾಯ ನಮಃ ಶಿವಾಯ ॥ ೩೪ ॥

ಪಂಚಮುಖನೂ ಸರ್ಪರಾಜಭೂಷಿತನೂ ಸುವರ್ಣವಸ್ತ್ರ ವನ್ನು ಧರಿಸಿದವನೂ ಮೂರು ಲೋಕಗಳನ್ನು ಶೋಭಿಸು ವವನೂ ಆನಂದನಿಲಯನೂ ವರದನೂ ಅಜ್ಞಾನ ನಾಶಕನೂ ದಾರಿದ್ರ್ಯ ದುಃಖವನ್ನು ನಾಶಮಾಡುವವನೂ ಆದ ಶಿವನಿಗೆ ನಮಸ್ಕಾರ.

ವಿಶ್ವೇಶ್ವರಾಯ ನರಕಾರ್ಣವತಾರಣಾಯ
ಕರ್ಣಾಮೃತಾಯ ಶಶಿಶೇಖರಭೂಷಣಾಯ ।
ಕರ್ಪೂರಕುಂದಧವಲಾಯ ಜಟಾಧರಾಯ
ದಾರಿದ್ರ್ಯದುಃಖದಹನಾಯ ನಮಃ ಶಿವಾಯ ॥ ೩೫ ॥

ವಿಶ್ವೇಶ್ವರನೂ ನರಕವೆಂಬ ಸಮುದ್ರದಿಂದ ಪಾರುಮಾಡ ತಕ್ಕವನೂ ಕಿವಿಗೆ ಅಮೃತದಂತೆ ಆನಂದಕರನೂ ಚಂದ್ರನನ್ನು ಶಿರೋಭೂಷಣವಾಗಿ ಉಳ್ಳವನೂ ಕರ್ಪೂರ ಮತ್ತು ಕುಂದ ಪುಷ್ಪದಂತೆ ಶುಭ್ರನೂ ಜಟಾಧರನೂ ದಾರಿದ್ರ್ಯದುಃಖವನ್ನು ನಾಶಮಾಡುವವನೂ ಆದ ಶಿವನಿಗೆ ನಮಸ್ಕಾರ.

ಚಂದ್ರೋದ್ಭಾಸಿತಶೇಖರೇ ಸ್ಮರಹರೇ ಗಂಗಾಧರೇ ಶಂಕರೇ
ಸರ್ಪೈರ್ಭೂಷಿತಕಂಠಕರ್ಣಕುಹರೇ ನೇತ್ರೋತ್ಥವೈಶ್ವಾನರೇ |
ದಂತಿತ್ವಕ್ಕೃತಸುಂದರಾಂಬರಧರೇ ತ್ರೈಲೋಕ್ಯಸಾರೇ ಹರೇ
ಮೋಕ್ಷಾರ್ಥಂ ಕುರು ಚಿತ್ತ ವೃತ್ತಿಮಮಲಾಮನ್ಯೈಸ್ತು
ಕಿಂ ಕರ್ಮಭಿಃ || ೩೬ ||

ಚಂದ್ರಶೇಖರನೂ ಮನ್ಮಥವೈರಿಯೂ ಗಂಗಾಧರನೂ ಶುಭಕರನೂ ಕೊರಳು ಕಿವಿಗಳಲ್ಲಿ ಸರ್ಪಗಳಿಂದ ಭೂಷಿತನೂ ಅಗ್ನಿನೇತ್ರನೂ ಗಜಚರ್ಮಾಂಬರಧಾರಿಯೂ ಮೂರುಲೋಕಗಳಲ್ಲಿ ಸಾರವಾದವನೂ ಆದ ಶಿವನಲ್ಲಿ ಮೋಕ್ಷಕ್ಕಾಗಿ ಪರಿಶುದ್ಧವಾದ ಮನಸ್ಸನ್ನಿಡು. ಉಳಿದ ಕರ್ಮಗಳಿಂದೇನು ?

ರಜತಾಚಲಶೃಂಗಾಗ್ರಹರ್ಮ್ಯಸ್ಥಾಯೈ ನಮೋ ನಮಃ
ಹಿಮಾಚಲಮಹಾವಂಶಪಾವನಾಯೈ ನಮೋ ನಮಃ |
ಶಂಕರಾರ್ಧಾಂಗ ಸೌಂದರ್ಯಶರೀರಾಯೈ ನಮೋ ನಮಃ
ಲಸನ್ಮರಕತಸ್ವಚ್ಛವಿಗ್ರಹಾಯೈ ನಮೋ ನಮಃ || ೩೭ ||

ಕೈಲಾಸಪರ್ವತಶಿಖರದ ಮೇಲಿರುವ ಪ್ರಾಸಾದದಲ್ಲಿ ನೆಲೆಸಿರುವ ಪಾರ್ವತೀದೇವಿಗೆ ನಮೋ ನಮಃ. ಶಿವನ ಅರ್ಧಾಂಗಿಯೂ ಸೌಂದರ್ಯಮಯ ಶರೀರಳೂ ಆದವಳಿಗೆ ನಮೋ ನಮಃ. ಮರಕತಮಣಿಯಂತೆ ಸ್ವಚ್ಛ ದೇಹವುಳ್ಳ ದೇವಿಗೆ ನಮೋ ನಮಃ.

ಶುಭಕಾರಿಣಿ ಭವಹಾರಿಣಿ ಭಯದಾರಿಣಿ ಭಜತಾಂ
ಸಕಲಶ್ರುತಿಯುತಿಸಂಹತಿ ವಿವಿಧ ಸ್ತುತಿ ವಿಷಯಂ |
ಕಲಯೇ ಮಮ ಹೃದಯೇ ತವ ಸದಯೇ ಪದಯುಗಲಂ
ಧರಣೀರಥತರುಣೀಶ್ವರ ಆರಿಣೀಮಣಿಗಹನೇ || ೩೮ ||

ಹೇ ಶುಭಕಾರಿಣಿ, ಸಂಸಾರನಾಶಿನೆ, ಭಕ್ತರ ಭಯವನ್ನು ಪರಿಹರಿಸುವವಳೆ, ದಯಾಶಾಲಿನಿ, ಶಿವಪತ್ನಿಯೆ, ಈಶ್ವರಿ, ಗಜ ಗಾಮಿನಿ, ಉಮಾದೇವಿಯೆ, ಸಮಸ್ತವೇದಗಳೂ ಯೋಗಿಗಳೂ ನಾನಾಬಗೆಯಲ್ಲಿ ಸ್ತುತಿಸುವ ನಿನ್ನ ಪಾದಯುಗಳವನ್ನು ನನ್ನ ಹೃದಯದಲ್ಲಿ ಧ್ಯಾನಿಸುತ್ತೇನೆ.

ಯಾ ದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ |
ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ || ೩೯ ||

ಯಾವ ದೇವಿಯು ಸಕಲ ಪ್ರಾಣಿಗಳಲ್ಲಿಯೂ ಬುದ್ಧಿರೂಪ ದಿಂದ ನೆಲೆಸಿರುವಳೋ, ಯಾವ ದೇವಿಯು ಸಕಲ ಪ್ರಾಣಿ ಗಳಲ್ಲಿಯೂ ಶಕ್ತಿರೂಪದಿಂದ ನೆಲೆಸಿರುವಳೋ ಆ ದೇವಿಗೆ ಮತ್ತೆ ಮತ್ತೆ ನಮೋ ನಮಃ.

ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ |
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಸ್ತುತೇ || ೪೦ ||

ಸಕಲ ಮಂಗಳವಸ್ತುಗಳಿಗೂ ಮಂಗಳಸ್ವರೂಪಳೆ, ಶಿವೇ, ಸರ್ವಾರ್ಥಗಳನ್ನು ಸಾಧಿಸಿಕೊಡತಕ್ಕವಳೇ, ಶರಣ್ಯೇ, ತ್ರಿಣೇತ್ರೆ, ನಾರಾಯಣಿ, ದೇವಿ, ನಿನಗೆ ನಮಸ್ಕಾರ.

ಅನ್ನಪೂರ್ಣೇ ಸದಾಪೂರ್ಣೇ ಶಂಕರಪ್ರಾಣವಲ್ಲಭೇ |
ಜ್ಞಾನವಿಜ್ಞಾನಸಿದ್ಧ್ಯರ್ಥಂ ಭಿಕ್ಷಾದಾನಂ ಪ್ರದೇಹಿ ಮೇ || ೪೧ ||

ಸದಾಪೂರ್ಣೆಯೂ ಶಿವನ ಪ್ರಾಣಕಾಂತೆಯೂ ಆದ ಅನ್ನಪೂರ್ಣೆ, ಜ್ಞಾನವಿಜ್ಞಾನಗಳ ಸಿದ್ಧಿಗಾಗಿ ನನಗೆ ಭಿಕ್ಷಾದಾನ ವನ್ನು ಕೊಡು.

ಆತ್ಮಾತ್ವಂ ಗಿರಿಜಾಮತಿಃ ಪರಿಜನಾಃ ಪ್ರಾಣಾಃ ಶರೀರಂ ಗೃಹಂ
ಪೂಜಾ ತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ |
ಸಂಚಾರಸ್ತು ಪದೋಃ ಪ್ರದಕ್ಷಿಣ ವಿಧಿಃ ಸ್ತೋತ್ರಾಣಿ ಸರ್ವಾ ಗಿರೋ
ಯದ್ಯತ್ಕರ್ಮಕರೋಮಿ ತತ್ತದಖಿಲಂ ಶಂಭೋತವಾರಾಧನಂ
|| ೪೨ ||

ಹೇ ಶಂಭುವೆ, ನನ್ನ ಆತ್ಮವೇ ನೀನು. ಬುದ್ಧಿಯೇ ಪಾರ್ವತೀದೇವಿ. ಪ್ರಾಣಗಳೇ ಸೇವಕರು. ಈ ದೇಹವೇ ನಿನ್ನ ಗೃಹ. ವಿಷಯಸುಖಗಳನ್ನು ಅನುಭವಿಸುವುದು ನಿನ್ನ ಪೂಜೆ. ನಿದ್ರೆಯೇ-ಸಮಾಧಿ. ಪಾದಸಂಚಾರವೇ ಪ್ರದಕ್ಷಿಣೆ. ಎಲ್ಲ ಮಾತುಗಳೂ ನಿನ್ನ ಸ್ತೋತ್ರವೇ. ಯಾವ ಯಾವ ಕೆಲಸವನ್ನು ಮಾಡುತ್ತೇನೋ ಅದೆಲ್ಲವೂ ನಿನ್ನ ಸೇವೆಯೇ.

ಕರಚರಣಕೃತಂ ವಾ ಕರ್ಮವಾಕ್ಕಾಯಜಂ ವಾ
ಶ್ರವಣನಯನಜಂ ವಾ ಮಾನಸಂ ವಾಪರಾಧಂ |
ವಿದಿತಮವಿದಿತಂ ವಾ ಸರ್ವಮೇತತ್ ಕ್ಷಮಸ್ವ
ಜಯ ಜಯ ಕರುಣಾಬ್ಧೇ ಶ್ರೀಮಹಾದೇವ ಶಂಭೋ || ೪೩ ||

ಕರುಣಾ ಸಮುದ್ರನಾದ ಮಹಾದೇವನೆ. ಸುಖಪ್ರದನೆ, ನಾನು ಕೈಕಾಲುಗಳಿಂದಾಗಲಿ ಮಾತಿನಿಂದಾಗಲಿ, ಕಿವಿ ಕಣ್ಣುಗಳಿಂದಾಗಲಿ ಅಥವಾ ಮನಸ್ಸಿನಿಂದಾಗಲಿ ಯಾವ ಯಾವ ತಪ್ಪನ್ನು ಮಾಡಿದ್ದೇನೋ ತಿಳಿದು ಮಾಡಿರಲಿ – ತಿಳಿಯದೆ ಮಾಡಿರಲಿ, ಅದೆಲ್ಲವನ್ನೂ ಮನ್ನಿಸು. ನಿನಗೆ ಜಯವಾಗಲಿ, ಜಯವಾಗಲಿ.

ಕನ್ನಡ ಸಾಹಿತ್ಯ ಪರಿಷತ್ತಿನ

ಅಮೃತನಿಧಿ

"ಒಬ್ಬ ಕನ್ನಡಿಗ—ಒಂದು ರೂಪಾಯಿ !"

ಒಂದು ಕೋಟಿ ರೂಪಾಯಿಯ ಇಡುಗಂಟಿನ ಉದ್ದೇಶ

ಪರಿಷತ್ತಿನ ಆರ್ಥಿಕ ಸುಸ್ಥಿತಿಗೆ ಶಾಶ್ವತ ವ್ಯವಸ್ಥೆ

ಕನ್ನಡಿಗರೇ, ದಯವಿಟ್ಟು ಉದಾರವಾಗಿ

ನಿಮ್ಮ ಕಾಣಿಕೆ ನೀಡಿ

ನಿಮ್ಮ ಹತ್ತಿರದ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಖಾತೆ ೧೦೧ಕ್ಕೆ

ಕಾಣಿಕೆ ಜಮಾ ಮಾಡಿ